# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 32/2017**
**ಪಿ.ಡಬ್ಲ್ಯೂ.ನಂಃ 1**

**ದಿನಾಂಕ 03-03-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**
**ಪಾಟಿ ಸವಾಲು : ಶ್ರೀ ಕೆ. ಜೆ. ಕೆ. ವಕೀಲರಿಂದ.**

ದಾವಾ ಸ್ವತ್ತು ದೇವನ ತೇಗನೂರು ಗ್ರಾಮದ ಸರ್ವೆ ನಂಬರ 24/2 , 7 ಎಕರೆ 29 ಗುಂಟೆ ಇದೆ. ಈ ದಾವೆಯಲ್ಲಿ ಮನೆಯ ಸಂಖ್ಯೆ ಮತ್ತು ವಿಸ್ತೀರ್ಣ ಮತ್ತು ಚೆಕ್ಕಬಂದಿ ಬರಿಸಿಲ್ಲ ಅನ್ನುವುದು ನಿಜ. ನನ್ನ ತಂದೆ ಶರಣಪ್ಪ ನಾನು 2 ವರ್ಷ ಮಗು ಇದ್ದಾಗ ಮರಣ ಹೊಂದಿರುತ್ತಾರೆ. ನನ್ನ ತಾತ ಮತ್ತು ಅವರ ತಂದೆ ಬಹಳ ಹಿಂದೆಯೇ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದಿದ ನಂತರ ಇಲ್ಲಿಯವರಗೆ ದಾವಾ ಸ್ವತ್ತು ನನ್ನ ಹೆಸರಿಗೆ ವರ್ಗಾವಣೆ ಮಾಡಲು ಯಾವುದೇ ಅರ್ಜಿ ಕೊಟ್ಟಿಲ್ಲ. ನನ್ನ ಅಣ್ಣನ ಹೆಸರಿನಲ್ಲಿ ಪಹಣಿಗಳು ಯಾವ ವರ್ಷದಿಂದ ಬರುತ್ತಿದೆ ಎಂದು ತಿಳಿದುಕೊಂಡಿಲ್ಲ. ದಾವಾ ಸ್ವತ್ತು ನನ್ನ ಅಣ್ಣನ ಹೆಸರಿನಲ್ಲಿ 1956 ರಿಂದ ಪಹಣಿಯಲ್ಲಿ ಬರುತ್ತಿದೆ ಅನ್ನುವುದು ನಿಜ. ಏಕೆಂದರೆ ಆತ ಮನೆಯಲ್ಲಿ ಹಿರಿಯ ಸದಸ್ಯ. ದಾವಾ ಸ್ವತ್ತು ಅಣ್ಣನ ಜೋತೆ ಸಾಗುವಳಿ ಮಾಡುತ್ತಿದ್ದೆ ಎಂದು ತೋರಿಸುವ ಯಾವುದೇ ದಾಖಲೆ ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ತೋಗರಿ ಎಷ್ಟು ಬೀಜ ಹಾಕಬೇಕು ಮತ್ತು ಅದಕ್ಕೆ ತೊಗಲುವ ಖರ್ಚಿನ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.

ನನ್ನ ಅಣ್ಣ 20 ವರ್ಷ ಹಿಂದೆ ಮರಣ ಹೊಂದಿರುತ್ತಾನೆ. ನನ್ನ ಅಣ್ಣ 26 ವರ್ಷ ಹಿಂದೆಯೇ ಮರಣ ಹೊಂದಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣನಿಗೆ ಮೊನಮ್ಮ ಎಂದು ಮಗಳು ಇರುತ್ತಾಳೆ. ಮೊನಮ್ಮಗೆ ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ಮತ್ತು ಅಣ್ಣನ ಮಧ್ಯ ದಾವಾ ಸ್ವತ್ತಿನ ಕುರಿತು 1990 ನಲ್ಲಿ ಮೌಖಿಕ ಪಾಲು ಆಗಿದೆ ಅನ್ನುವುದು ಸುಳ್ಳು. ಅದರಂತೆ ಇಬ್ಬರಿಗೂ ತಲಾ ಅರ್ಧ ಜಮೀನು ಬಂದಿರುತ್ತದೆ ಅನ್ನುವುದು ಸುಳ್ಳು. ಉತ್ತರ ದಿಕ್ಕಿನ ಅರ್ಧ ಜಮೀನು ನನ್ನ ಪಾಲಿಗೆ ಮತ್ತು ದಕ್ಷಿಣ ದಿಕ್ಕಿನ ಅರ್ಧ ಪಾಲು ಅಣ್ಣನ ಹಿಸ್ಸೆಗೆ ಹೋಗಿದೆ ಅನ್ನುವುದು ಸುಳ್ಳು. ಮನೆಯಲ್ಲಿ ಪೂರ್ವ ದಿಕ್ಕಿನ ಅರ್ಧ ಪಾಲು ನನ್ನ ಹಿಸ್ಸೆಗೆ ಮತ್ತು ಪಶ್ಚಿಮ ದಿಕ್ಕಿನ ಅರ್ಧ ಪಾಲು ನನ್ನ ಅಣ್ಣನ ಪಾಲಿಗೆ ಹೊಗಿರುತ್ತದೆ ಅನ್ನುವುದು ನಿಜ.

**ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**